**ದಿನಾಂಕ 09.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿಯನ್ನು **ನಿಪಿ 6** ಎಂದು, ನಕ್ಷೆಯ ದೃಢೀಕೃತ ಪ್ರತಿಯನ್ನು **ನಿಪಿ 7** ಎಂದು, ಐಎಮ್‌ವಿ ವರದಿಯ ದೃಢೀಕೃತ ಪ್ರತಿಯನ್ನು **ನಿಪಿ 8** ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು **ನಿಪಿ 9** ಎಂದು, ಮೋಟಾರು ವಾಹನ ಕಾಯ್ದೆಯ ಕಲಂ 133 ರಡಿ ನೀಡಿರುವ ನೋಟೀಸು ಮತ್ತು ಸದರಿ ನೋಟೀಸಿಗೆ ನೀಡಿರುವ ಉತ್ತರದ ದೃಢೀಕೃತ ಪ್ರತಿಗಳನ್ನು ಕ್ರಮವಾಗಿ **ನಿಪಿ 10 ಮತ್ತು 11** ಎಂದು, ಪೊಲೀಸ್ ಇಂಟಿಮೇಷನ್ ನ ಧೃಡಿಕೃತ ಪ್ರತಿಯನ್ನು **ನಿಪಿ 12** ಎಂದು, ಸಿಸಿ 1434/2023ರ ಆದೇಶದ ಪುಟಗಳ ಧೃಡಿಕೃತ ಪ್ರತಿಗಳನ್ನು **ನಿಪಿ 13** ಎಂದು, ಚಾಲನಾ ಪರವಾನಗಿ ಮತ್ತು ಆಧಾರ್ ಕಾರ್ಡಿನ ನೋಟರಿ ಪ್ರತಿ(ಮೂಲ ದಾಖಲಾತಿಯೊಂದಿಗೆ ಹೋಲಿಕೆ ಮಾಡಿ ಮೂಲ ದಾಖಲಾತಿಯನ್ನು ಹಿಂದಿರುಗಿಸಲಾಯಿತು)ಗಳನ್ನು ಕ್ರಮವಾಗಿ **ನಿಪಿ 14 ಮತ್ತು 15** ಎಂದು ಗುರುತಿಸಲಾಯಿತು.

1ನೇ ಎದುರುದಾರರ ಪರ ಮಾನ್ಯ ವಕೀಲರು ಪ್ರತಿವಾದ ಪತ್ರ ಸಲ್ಲಿಸದಿರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು: 2ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ನಾನು ಆ ದಿನ ಹೋಗುತ್ತಿದ್ದ ದ್ವಿಚಕ್ರ ವಾಹನ ನನ್ನ ಹೆಸರಿನಲ್ಲಿ ಇದೆ. ಸದರಿ ದ್ವಿಚಕ್ರ ವಾಹನಕ್ಕೆ ಯಾವ ಕಂಪನಿಯಿಂದ ವಿಮೆ ಪಡೆದಿರುತ್ತೇನೆ ಎಂದು ನೆನಪಿಲ್ಲ. ನನ್ನ ದ್ವಿಚಕ್ರ ವಾಹನವನ್ನು 2020ರಲ್ಲಿ ಖರೀದಿ ಮಾಡಿದ್ದು, ಅದಕ್ಕೆ 5 ವರ್ಷಗಳ ವಿಮೆ ನೀಡಿದ್ದರು. ನಾನು ಹೋಗುತ್ತಿದ್ದ ರಸ್ತೆ ದ್ವಿಮುಖ ಸಂಚಾರ ರಸ್ತೆ ಆಗಿರುತ್ತದೆ. ಆ ದಿನ ನಾನು ಸುಮಾರು 40 ಕಿ.ಮೀ

ವೇಗದಲ್ಲಿ ಹೋಗುತ್ತಿದ್ದೆ. ಅಪಘಾತ ಮಧ್ಯಾಹ್ನ 2.50 ಗಂಟೆಯ ಸಮಯದಲ್ಲಿ ಸಂಭವಿಸಿರುತ್ತದೆ. ನಾನು ಹೋಗುತ್ತಿದ್ದ ರಸ್ತೆಯಲ್ಲಿ ವಾಹನ ಸಂಚಾರ ಕಂಡುಬರುತ್ತಿತ್ತು. ಆಪಾದಿತ ವಾಹನವನ್ನು ಅಪಘಾತಕ್ಕೂ ಪೂರ್ವದಲ್ಲಿ 100 ಮೀಟರ್ ಅಂತರದಲ್ಲಿ ನೋಡಿರುತ್ತೇನೆ. ನನ್ನ ಮುಂಭಾಗ ಒಂದು ಕಾರು ಹೋಗುತ್ತಿತ್ತು. ಎದುರಿನಿಂದ ಆಪಾದಿತ ವಾಹನ ಬರುವುದನ್ನು ಕಂಡು ನನ್ನ ಮುಂದೆ ಹೋಗುತ್ತಿದ್ದ ಕಾರು ಎಡಭಾಗಕ್ಕೆ ತೆಗೆದುಕೊಂಡಿದ್ದು, ಆ ಸಂದರ್ಭದಲ್ಲಿ ಆಪಾದಿತ ವಾಹನ ನನಗೆ ಡಿಕ್ಕಿಪಡಿಸಿರುತ್ತದೆ. ನನ್ನ ಮುಂದೆ ಹೋಗುತ್ತಿದ್ದ ಕಾರು ಸ್ವಲ್ಪ ಮುಂದೆ ಹೋಗುತ್ತಿದ್ದು, ನಿಖರವಾದ ಅಂತರ ಹೇಳಲು ಆಗುವುದಿಲ್ಲ. ಎರಡು ವಾಹನಗಳ ನಡುವೆ ಅಂತರ ಕಾಯ್ದುಕೊಳ್ಳಬೇಕು ಎಂಬ ವಿಚಾರ ನನಗೆ ತಿಳಿದಿದೆ. ನನ್ನ ಮುಂಭಾಗ ಹೋಗುತ್ತಿದ್ದ ಕಾರು ಎಡಕ್ಕೆ ತೆಗೆದುಕೊಂಡ ಹಾಗೆ ನಾನೂ ಕೂಡ ತೆಗೆದುಕೊಂಡಿದ್ದಲ್ಲಿ ಅಪಘಾತವಾಗುತ್ತಿರಲಿಲ್ಲ ಎಂದರೆ ಸಾಕ್ಷಿಯು ಸದರಿ ಕಾರನ್ನು ಒಮ್ಮೆಲೆ ಎಡಕ್ಕೆ ತೆಗೆದುಕೊಂಡಿದ್ದು, ಎದುರಿನಿಂದ ಬರುತ್ತಿದ್ದ ವಾಹನವನ್ನು ಕಂಡು ನನಗೆ ಯಾವ ದಿಕ್ಕಿಗೆ ತೆಗೆದುಕೊಳ್ಳಬೇಕು ಎಂದು ತಿಳಿಯಲಿಲ್ಲ ಎಂದು ನುಡಿಯುತ್ತಾರೆ. ನಾನು ದ್ವಿಚಕ್ರ ವಾಹನವನ್ನು ಎಡಭಾಗಕ್ಕೆ ತೆಗೆದುಕೊಳ್ಳದೇ ಪೂರ್ಣವಾಗಿ ಬಲಭಾಗಕ್ಕೆ ತೆಗೆದುಕೊಂಡ ಕಾರಣ ನನ್ನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ವಾಹನ ಸಂಚಾರ ಹೆಚ್ಚಾಗಿ ಇರಲಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ನಂತರ ನಾನು ಆಸ್ವಾದ್ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಒಂದು ದಿನ ದಾಖಲಾಗಿದ್ದು, ನಂತರ ಇ.ಎಸ್.ಐ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ಅಪಘಾತ ಹೇಗೆ ಸಂಭವಿಸಿತು ಎಂದು ತಿಳಿಸಿರುತ್ತೇನೆ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಆಸ್ವಾದ್ ಆಸ್ಪತ್ರೆಯಿಂದ ಇ.ಎಸ್.ಐ ಆಸ್ಪತ್ರೆಗೆ ನನ್ನ ಸ್ವ ಇಚ್ಛೆಯಿಂದ ಹೋಗಿದ್ದು, ಬಿಡುಗಡೆ ಮಾಡಿಸಿಕೊಂಡು ಹೋಗಿರುವುದಿಲ್ಲ. ನನಗೆ ಇ.ಎಸ್.ಐ ಸೌಲಭ್ಯ ಇದ್ದ ಕಾರಣ

ಇ.ಎಸ್.ಐ ಆಸ್ಪತ್ರೆಗೆ ಹೋಗಿರುತ್ತೇನೆ. ನನಗೆ ಸದರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡಲಾಗಿರುತ್ತದೆ ಎಂದರೆ ಸರಿ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನೆನಪಿಲ್ಲ. ಸದರಿ ಆಸ್ಪತ್ರೆಯಲ್ಲಿ 15-16 ದಿನಗಳ ಕಾಲ ದಾಖಲಾಗಿದ್ದೆನು. ನನಗೆ ಇ.ಎಸ್.ಐ ಸೌಲಭ್ಯವನ್ನು ಹೊರತುಪಡಿಸಿ ಇತರ ವಿಮಾ ಸೌಲಭ್ಯ ಇರಲಿಲ್ಲ.

ನನ್ನ ಜನ್ಮ ದಿನಾಂಕ 18.04.1994. ನಾನು ಐಟಿಐ ತರಬೇತಿ ಮುಗಿಸಿರುತ್ತೇನೆ. ನಾನು ಎಲೆಕ್ಟ್ರಿಷಿಯನ್ ಆಗಿ ಬೆಳ್ಳಂದೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನೇಮಕಾತಿ ಆದೇಶವನ್ನು ನೀಡಿರುವುದಿಲ್ಲ. ನನಗೆ ಈಗ ತಿಂಗಳಿಗೆ ರೂ.21,000/- ಸಂಬಳ ನೀಡುತ್ತಿದ್ದಾರೆ. ಅಪಘಾತವಾದಾಗ ನನಗೆ ರೂ.19,000/- ಸಂಬಳ ಬರುತ್ತಿತ್ತು. ಅಪಘಾತವಾದ 8 ತಿಂಗಳ ನಂತರ ನಾನು ಕೆಲಸಕ್ಕೆ ಹೋಗಲು ಪ್ರಾರಂಭಿಸಿರುತ್ತೇನೆ. ನಾನು ಕೆಲಸಕ್ಕೆ ಗೈರು ಹಾಜರಾದ ಬಗ್ಗೆ ದಾಖಲಾತಿಯನ್ನು ನೀಡಿರುತ್ತೇನೆ. ನನ್ನ ರಜೆಯ ಅವಧಿಯಲ್ಲಿ ನನಗೆ ಸಂಬಳ ಬಂದಿರುತ್ತದೆ ಎಂದರೆ ಸರಿಯಲ್ಲ. ಕೊಟಕ್ ಮಹೀಂದ್ರಾ ಬ್ಯಾಂಕಿನಲ್ಲಿರುವ ನನ್ನ ಖಾತೆಗೆ ಸಂಬಳದ ಹಣವನ್ನು ಹಾಕುತ್ತಿದ್ದರು. 4011904722 ಸಂಖ್ಯೆಯ ಖಾತೆ ನನಗೆ ಸಂಬಂಧಪಟ್ಟದ್ದಾಗಿರುತ್ತದೆ. ಸಾಕ್ಷಿಗೆ ಸದರಿ ದಾಖಲಾತಿಯ ನೆರಳಚ್ಚು ಪ್ರತಿಯನ್ನು ತೋರಿಸಲಾಗಿ ಅದು ತಮ್ಮ ಖಾತೆಯದ್ದೇ ಎಂದು ತಿಳಿಸಿರುತ್ತಾರೆ. ಸದರಿ ದಾಖಲಾತಿ ನೆರಳಚ್ಚು ಪ್ರತಿಯಾದ ಕಾರಣ ಅದನ್ನು ನಿಶಾನೆಯನ್ನಾಗಿ ಮಾಡಿರುವುದಿಲ್ಲ. ಅಪಘಾತವಾದ ನಂತರ ನನಗೆ 6 ತಿಂಗಳ ಸಂಬಳ ಬಂದಿರುವುದಿಲ್ಲ. ದಿನಾಂಕ 07.07.2023ರಂದು ರೂ.10,000/- ಗಳು ನನ್ನ ಕಂಪನಿಯ ವತಿಯಿಂದ ನನ್ನ ಖಾತೆಗೆ ಬಂದಿರುತ್ತದೆ ಎಂದರೆ ಸರಿ. ತದನಂತರದಲ್ಲಿ ನಿರಂತರವಾಗಿ ಸಂಬಳ ಬಂದಿರುತ್ತದೆ ನನಗೆ. ನನ್ನ ಖಾತೆಗೆ ಸಂಬಂಧಿಸಿದ ಅಕೌಂಟ್ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಅಪಘಾತವಾದ ನಂತರ ನನಗೆ 6 ತಿಂಗಳು ಸಂಬಳ ನೀಡದೇ ಇರುವ ಬಗ್ಗೆ ಕಂಪನಿಯಿಂದ

ದಾಖಲಾತಿ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಮ್ಮ ಕಂಪನಿಯ ಸಂಬಂಧಪಟ್ಟವರನ್ನು ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನನಗೆ ಮೊದಲಿನಂತೆ ಕೆಲಸ ಮಾಡಲು ಆಗುತ್ತಿಲ್ಲ ಎಂದು ಕಂಪನಿಯವರು ಯಾವುದೇ ಪತ್ರ ನೀಡಿಲ್ಲ ಮತ್ತು ಕೆಲಸದಿಂದ ತೆಗೆದಿಲ್ಲ.

ನಾನು ಈಗಲೂ ಮೊದಲಿನಂತೆ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನಿಪಿ 5 ಅನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಕೈಗೆ ಅಳವಡಿಸಲಾದ ಒಳಜೋಡಣೆಯನ್ನು ತೆಗೆಯಲಾಗಿದೆ ಎಂದರೆ ಸರಿ. ಅದನ್ನು ಉಚಿತವಾಗಿ ಶಸ್ತ್ರ ಚಿಕಿತ್ಸೆಯ ಮೂಲಕ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಜಯಶ್ರೀ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಒಳಜೋಡಣೆ ತೆಗೆಯಿಸಿರುತ್ತೇನೆ. ಮೇಲೆ ತಿಳಿಸಿದ ಆಸ್ಪತ್ರೆಗಳನ್ನು ಹೊರತುಡಿಸಿ ಬೇರೆ ಆಸ್ಪತ್ರೆಗಳಲ್ಲಿಯೂ ಸಹ ಚಿಕಿತ್ಸೆ ಪಡೆದಿದ್ದು, ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ಹೆಚ್ಚಿ ನ ಪರಿಹಾರ ಪಡೆಯುವ ಉದ್ದೇಶದಿಂದ ವಿನಾಕಾರಣ ವಿಚಾರಣೆಯನ್ನು ವಿಳಂಬ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾದ ಕಾರಣ ಎದುರುದಾರರು ಪರಿಹಾರ ಪಾವತಿಸಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಅಪಘಾತವಾದಾಗ ನಾನು ಕೆಲಸ ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದೆ. ಬೆಳಿಗ್ಗೆ 7 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನನ್ನ ಕೆಲಸ ಅವಧಿ ಆಗಿತ್ತು. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಾನು ಕೆಲಸದ ನಿಮಿತ್ತವಾಗಿ ಹೋಗುತ್ತಿದ್ದಾಗ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಆದ ಕಾರಣ ನಮ್ಮ ಕಂಪನಿಯವರು ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ. ಈಗ ನಾನು ಇ.ಎಸ್.ಐ ಆಸ್ಪತ್ರೆಗೆ ಹೋಗುತ್ತಿಲ್ಲ. ನನಗೆ ಸಾಮಾನ್ಯ ಸ್ವರೂಪದ ಗಾಯಗಳು ಆಗಿದ್ದು, ಅದದು ಗುಣವಾಗಲು ನಾನು ಹೇಳುವಷ್ಟು ಸಮಯ ಬೇಕಾಗಿಲ್ಲ ಎಂದರೆ ಸರಿಯಲ್ಲ. ನನ್ನ ಸ್ವಂತ ಕೆಲಸಗಳಿಗೆ ರಜೆಗಳನ್ನು ಬಳಸಿಕೊಂಡು ಸುಳ್ಳು ಪರಿಹಾರ

ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**
**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**